ಉಳಿದ ಗ್ರಾಮಗಳ ಕಾಮಗಾರಿಗಳು ಬಹುತೇಕ ಮುಕ್ತಾಯವಾಗಿದ್ದು ಎಂಡ್ ಕನೆಕ್ಷನ್ ವಿದ್ಯುತ್ ಸಂಪರ್ಕ ಕೆಲಸಗಳು ಮಾತ್ರ ಬಾಕಿ ಇದ್ದು ಜುಲೈ 98ರೊಳಗೆ ನೀರು ಸರಬರಾಜು ವ್ಯವಸ್ಥೆ ಕಾರ್ಯಾರಂಭ ಮಾಡುವ ನಿರೀಕ್ಷೆ ಇದೆ.

ಎರಡನೇ ಹಂತದಲ್ಲಿ ಒಳಗೊಂಡಿರುವ ದಕ್ಷಿಣ ಕನ್ನಡ ಜಿಲ್ಲೆಯ 51 ಮತ್ತು ಉಡುಪಿ ಜಿಲ್ಲೆಯ 19 ಗ್ರಾಮಗಳ (ಒಟ್ಟು 70) ಪೈಕಿ ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆಯ 42 ಮತ್ತು ಉಡುಪಿ ಜಿಲ್ಲೆಯ 12 (ಒಟ್ಟು 54) ಗ್ರಾಮಗಳ ನೀರು ಸರಬರಾಜು ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು ಈಗಾಗಲೇ 12 ಟೆಂಡರ್‌ಗಳನ್ನು ಅನುಮೋದಿಸಲಾಗಿದ್ದು 6 ಗ್ರಾಮಗಳಲ್ಲಿ ಕಾಮಗಾರಿಗಳು ಪ್ರಗತಿಯಲ್ಲಿವೆ.

ಯೋಜನೆಯ ಮುಕ್ತಾಯದ ಅವಧಿಯಾದ ದಿನಾಂಕ 31- 12- 1999ರೊಳಗೆ ಎಲ್ಲ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ವಿಷಯ: ರಾಜ್ಯದಲ್ಲಿ ಸ್ವಂತ ಸಂಪನ್ಮೂಲವಿಲ್ಲದ ಪಂಚಾಯತ್‌ಗಳಿಗೆ ಹೆಚ್ಚುವರಿ ಅನುದಾನ

1016 (1367)

ಶ್ರೀ ವಸಂತ ವಿ. ಸಾಲಿಯಾನ (ಕಾಪು): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸ್ವಂತ ಸಂಪನ್ಮೂಲವಿಲ್ಲದ ಪಂಚಾಯತಿಗಳ ಸಂಖ್ಯೆ ಎಷ್ಟು?

ಆ) ಇಂತಹ ಪಂಚಾಯತಿಗಳ ಅಭಿವೃದ್ಧಿ ಬಗ್ಗೆ ಸರ್ಕಾರದವರು ಹೆಚ್ಚುವರಿ ನೀಡಿದ ಅನುದಾನವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಯಾವುದೂ ಇಲ್ಲ.

ಆ) ಸರ್ಕಾರ ನೀಡಿರುವ ಅನುದಾನಗಳ ವಿವರಗಳನ್ನು ಲಗತ್ತಿಸಿದೆ.

ಅನುಬಂಧ

| ಕ್ರ. ಸಂ. | ಜಿಲ್ಲಾ ಪಂಚಾಯತಿ ಹೆಸರು | ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 206ರ ಪ್ರಕಾರ ರಾಜ್ಯಸರ್ಕಾರವು ಗ್ರಾಮ ಪಂಚಾಯತಿಗಳಿಗೆ 1997-98ನೇ ಸಾಲಿನಲ್ಲಿ ನೀಡಿದ ಅನುದಾನ (ರೂ. ಲಕ್ಷಗಳಲ್ಲಿ) | 10ನೇ ಹಣಕಾಸು ಆಯೋಗದ ಶಿಫಾರಸ್ಸಿನ ಪ್ರಕಾರ ಕೇಂದ್ರಸರ್ಕಾರವು 1997-98ನೇ ಸಾಲಿನಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಬಿಡುಗಡೆ ಮಾಡಿರುವ ಸಹಾಯಾನುದಾನ (ರೂ. ಲಕ್ಷಗಳಲ್ಲಿ) |
|---|---|---|---|
| 1. | ಬೆಂಗಳೂರು | 115.00 | 28.795 |
| 2. | ಬೆಂಗಳೂರು ಗ್ರಾಮಾಂತರ | 227.00 | 59.425 |
| 3. | ಬೆಳಗಾಂ | 480.00 | 123.370 |
| 4. | ಬಳ್ಳಾರಿ | 223.00 | 57.928 |
| 5. | ಬೀದರ್ | 178.00 | 44.385 |
| 6. | ಬಿಜಾಪುರ | 364.00 | 92.658 |
| 7. | ಚಿಕ್ಕಮಗಳೂರು | 225.00 | 44.338 |
| 8. | ಚಿತ್ರದುರ್ಗ | 276.00 | 70.408 |
| 9. | ದಕ್ಷಿಣಕನ್ನಡ | 350.00 | 86.013 |
| 10. | ಧಾರವಾಡ | 441.00 | 103.470 |
| 11. | ಗುಲ್ಬರ್ಗಾ | 337.00 | 84.307 |
| 12. | ಹಾಸನ | 259.00 | 59.095 |
| 13. | ಕೊಡಗು | 99.00 | 19.512 |
| 14. | ಕೋಲಾರ | 306.00 | 75.245 |

| | | | |
|---|---|---|---|
| 15. | ಮಂಡ್ಯ | 231.00 | 59.750 |
| 16. | ಮೈಸೂರು | 357.00 | 98.845 |
| 17. | ರಾಯಚೂರು | 300.00 | 78.612 |
| 18. | ಶಿವಮೊಗ್ಗ | 368.00 | 68.762 |
| 19. | ತುಮಕೂರು | 321.00 | 81.797 |
| 20. | ಉತ್ತರಕನ್ನಡ | 209.00 | 49.285 |
| | | 5666.00 | 1386.00 |